# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189-ಹೊಂಗಸಂದ್ರ,

## Ward DETER Commitee

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 13.08.2021 ರಂದು ಸಂಜೆ 03:00 ಘಂಟೆಗೆ Ward DETER Commitee ಅನ್ನು 189-ಹೊಂಗಸಂದ್ರ ಡಾ|| ಬಿ.ಆರ್ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆಸಿದ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ. ಆರ್ | ಅಧ್ಯಕ್ಷರು/ನೋಡಲ್ ಅಧಿಕಾರಿಗಳು<br>ಕಾರ್ಯಪಾಲಕ ಅಭಿಯಂತರರು<br>ಬೃಹತ್ ನೀರುಗಾಲುವೆ ವಿಭಾಗ |
| 2 | ಶ್ರೀ ಕೆ.ಎಸ್. ರಾಮೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು<br>ವಾರ್ಡ್ ಸಂ. 189 |
| 3 | ಶ್ರೀಮತಿ ಸುಕಂದ ರಾಮಚಂದ್ರ ರೆಡ್ಡಿ | ಸದಸ್ಯರು |
| 4 | ಶ್ರೀ ಎಂ ಮುನಿರಾಜು | ಸದಸ್ಯರು |
| 5 | ಶ್ರೀ ಕೋದಂಡ ರಾಮ ರೆಡ್ಡಿ | ಸದಸ್ಯರು |
| 6 | ಶ್ರೀ ವೆಂಕಟೇಶಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು, ಹೊಂಗಸಂದ್ರ |
| 7 | ಶ್ರೀ ಕೆ.ಎಸ್ ಲೋಕೇಶ್ | ಬೇಗೂರು ಪೋಲೀಸ್ ಠಾಣೆ |
| 8 | ಶ್ರೀ ಸಂತೋಷ ಪ್ರಸಾದ | ಸಹಾಯಕ ಅಭಿಯಂತರರು,<br>ಬಿ.ಡಬ್ಲ್ಯೂ.ಎಸ್.ಎಸ್.ಬಿ ಹೊಂಗಸಂದ್ರ |
| 9 | ಶ್ರೀ ಹರೀಶ್ ಹೆಚ್.ಆರ್ | ಅರಣ್ಯ ವಲಯ ಅಧಿಕಾರಿ |
| 10 | ಶ್ರೀ ವಿನೋದ್ ಕುಮಾರ್ ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು, ಹೊಂಗಸಂದ್ರ |
| 11 | ಶ್ರೀ ಸ್ವಾಮಿ.ಡಿ | ಕಿರಿಯ ಅಭಿಯಂತರರು, ಎಸ್-19, ಬೆಸ್ಕಾಂ |
| 12 | ಶ್ರೀ ಕುಮಾರ್ ಹೆಚ್ | ಕಂದಾಯ ನಿರೀಕ್ಷಕರು, ಹೊಂಗಸಂದ್ರ |
| 13 | ಶ್ರೀ ಹೆಚ್ ನರಸಪ್ಪ | ತೋಟಗಾರಿಕೆ ನಿರೀಕ್ಷಕರು |
| 14 | ಶ್ರೀಮತಿ ಜ್ಯೋತಿ | ಸ್ಟಾಫ್ ನರ್ಸ್ |
| 15 | ಶ್ರೀಮತಿ ವಾಣಿ ಎಂ | Junior HAF |
| 16 | ಶ್ರೀ ದೀಪಕ್. ಜಿ | DEO |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರು ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿಲಾಗಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಸದ್ಯಸರು, ಸ್ವಯಂ ಸೇವಕರು ಮತ್ತು ಅಧಿಕಾರಿಗಳ ಸಹಕಾರದೊಂದಿಗೆ ಕೋವಿಡ್-19, 3ನೇ ಅಲೆಯ ಸಿದ್ದತೆಗೆ ಸೂಕ್ತ ಕ್ರಮ ಕೈಗೊಳುವಂತೆ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿದರು.

**(ಮು.ತಿ.ನೋ)**

Scanned with

- **ಆರೋಗ್ಯ ಇಲಾಖೆ (ಕೋವಿಡ್-19):**
  1. ಶ್ರೀ ಡಾ|| ರಂಗರಾಜು ರವರ ಪರವಾಗಿ ಸಭೆಗೆ ಹಾಜರಿದ ಶ್ರೀಮತಿ ಜ್ಯೋತಿ, ಸ್ಟಾಫ್ ನರ್ಸ್ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸೋಂಕೀತರ ಪ್ರಕರಣವನ್ನು ವಿವರಿಸುತ್ತಾ ಕಳೆದ 10 ದಿನಗಳಲ್ಲಿ ಒಟ್ಟು 03 ಪ್ರಕರಣಗಳು ಉಲ್ಬಣವಾಗಿರುತ್ತದೆ ಎಂದು ತಿಳಿಸಿದರು

- . ಒಟ್ಟು 1034 1ನೇ ಡೌಸ್ ಲಸಿಕೆಗಳನ್ನು
- ಒಟ್ಟು 1699 2ನೇ ಡೌಸ್ ಲಸಿಕೆಗಳನ್ನು
- 18 ರಿಂದ 44 ಮತ್ತು 45 ವರ್ಷ ಮೇಲ್ಪಟವರಿಗೆ

Covishield – ಒಟ್ಟು 1061

Covaxine- ಒಟ್ಟು 807

ಲಸಿಕೆಯನ್ನು ನೀಡಲಾಗಿದೆ ಎಂದು ವೈದ್ಯರ ಪರವಾಗಿ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಜ್ಯೋತಿ, ಸ್ಟಾಫ್ ನರ್ಸ್ ತಿಳಿಸಿದರು.

2. ಕೋವಿಡ್-19 3ನೇ ಅಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡುವುದು, ಜಾಗೃತಿ ಅಭಿಯಾನ ಹಮ್ಮಿಕೊಳುವುದು, ಹೆಚ್ಚಾಗಿ ಆರೈಕೆ ಕೇಂದ್ರವನ್ನು ಸ್ಥಾಪಿಸುವುದು, ಹಾಗೂ ಪ್ರತ್ಯೇಕವಾಗಿ ಮಕ್ಕಳ ಅಸ್ಪತ್ರೆಯನ್ನು ಸ್ಥಾಪಿಸುವಂತೆ ಸಭೆಯಲ್ಲಿ ಸದ್ಯಸರಾದ ಶ್ರೀ ಎಂ ಮುನಿರಾಜು, ಶ್ರೀ ಕೋದಂಡ ರಾಮ ರೆಡ್ಡಿ ರವರು ಪ್ರಸ್ತಾಪಿಸಿದ್ದು, ಈ ಬಗ್ಗೆ ಶ್ರೀ ಡಾ|| ರಂಗರಾಜು ರವರ ಪರವಾಗಿ ಸಭೆಗೆ ಹಾಜರಿದ ಶ್ರೀಮತಿ ಜ್ಯೋತಿ, ಸ್ಟಾಫ್ ನರ್ಸ್ ರವರು ವಾರ್ಡ್ ವ್ಯಾಪ್ತಿಯಲ್ಲಿ ಮಕ್ಕಳ ಆರೈಕೆ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

- **ಕಂದಾಯ ಇಲಾಖೆ:**
  1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಲ್ಲಿ ಕಂದಾಯ ಪಾವತಿ ಮಾಡಿರುವವರಿಗೆ ದಂಡ ಪಾವತಿಸಲು ನೋಟೀಸ್ ಜಾರಿ ಮಾಡಲಾಗಿರುತ್ತದೆ ಎಂದು ಸದಸ್ಯರಾದ ಎಂ ಮುನಿರಾಜು, ಸುಕಂದ ರಾಮಚಂದ್ರ ರೆಡ್ಡಿ ಮತ್ತು ಕೋದಂಡ ರಾಮರೆಡ್ಡಿ ರವರು ಪ್ರಸ್ತಾಪಿಸಿದ್ದು, ಈ ಬಗ್ಗೆ ಶ್ರೀ ಕುಮಾರ್ ಹೆಚ್, ಕಂದಾಯ ನಿರೀಕ್ಷಕರು ರವರು ಹೊಂಗಸಂದ್ರ ವಾರ್ಡ್ ವಸತಿ ವಲಯದ ಪ್ರಮಾಣವನ್ನು ಮೇಲ್ದರ್ಜೆ ಮಾಡಿರುವುದರಿಂದ ಸಬ್ ರಿಜಿಸ್ಟಾರ್ ಮೌಲ್ಯದಂತೆ 2020 ರ ನಂತರ ಕಂದಾಯ ಪಾವತಿಸಿದವರೆಗೆ 2% ತಿಂಗಳಿಗೆ 24% ವರ್ಷದಂತೆ ದಂಡ ಪಾವತಿಸುವಂತೆ ನೋಟಿಸ್ ಜಾರಿಮಾಡಲಾಗಿದ್ದು ಕೆಲವರು ನ್ಯಾಯಲಯದಲ್ಲಿ ದಾವೆ ಹೂಡಿರುದಾಗಿ ಸಭೆಗೆ ತಿಳಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ.**
  1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ನೀರುಗಾಲುವೆ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ. Re-survey ಮಾಡಲು ಸದಸ್ಯರು ರವರುಗಳು ಕೋರಿದ್ದರು, ಇದುವರೆಗೂ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಲಾಗಿಲ್ಲವೆಂದು ಸದಸ್ಯರಾದ ಮುನಿರಾಜು, ಸುಕಂದ ರಾಮಚಂದ್ರ ರೆಡ್ಡಿ ಮತ್ತು ಕೋದಂಡ ರಾಮರೆಡ್ಡಿ ರವರು ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಬೃಹತ್ ನೀರುಗಾಲುವೆ ರವರೊಂದಿಗೆ ಜಂಟಿ ತಪಾಸಣೆ ಮಾಡಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದ್ದರು.
  2. ವಾರ್ಡ್ ವ್ಯಾಪ್ತಿಯ ಸಿಲ್ಕ್ ಬೋರ್ಡ್ ಕಾಲೋನಿಯಿಂದ ಮುಖ್ಯ ರಸ್ತೆಯ ವರೆಗೆ ಒಳಚರಂಡಿ ಕಾಮಗಾರಿಯನ್ನು ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಪೂರ್ಣಗೊಳಿಸುವಂತೆ ವಾರ್ಡ್ ಸಭೆಯ ಸದಸ್ಯರಾದ ಎಂ ಮುನಿರಾಜು, ಸುಕಂದ ರಾಮಚಂದ್ರ ರೆಡ್ಡಿ ಮತ್ತು ಕೋದಂಡ ರಾಮರೆಡ್ಡಿ ರವರು ಸಭೆಯಲ್ಲಿ ತಿಳಿಸಿದ್ದರು. ಈ ಬಗ್ಗೆ ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ತಿಳಿಸಿದ್ದು, ಈ ಬಗ್ಗೆ ಅಧ್ಯಕ್ಷರು/ನೋಡಲ್ ಅಧಿಕಾರಿ ರವರು 1 ವಾರದೊಳಗಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿದರು.

Scanned with

3. ವಾರ್ಡ್ ವ್ಯಾಪ್ತಿಯ 4ನೇ ಅಡ್ಡ ರಸ್ತೆ, ಎಸ್.ಡಬ್ಲ್ಯೂ.ಡಿ. ಅಡ್ಡ ರಸ್ತೆಯಿಂದ ಮುಖ್ಯ ರಸ್ತೆಯಲ್ಲಿ ಹೊಸದಾಗಿ ಒಳಚರಂಡಿ ಮಾರ್ಗ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಎಂ ಮುನಿರಾಜು, ಸುಕಂದ ರಾಮಚಂದ್ರ ರೆಡ್ಡಿ ಮತ್ತು ಕೋದಂಡ ರಾಮರೆಡ್ಡಿ ರವರು ಸಭೆಯಲ್ಲಿ ತಿಳಿಸಿದ್ದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರು ರಸ್ತೆ ಅಗಲೀಕರಣ ವಿಭಾಗ ವತಿಯಿಂದ ಕಾಮಗಾರಿಯು ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿ ಪೂರ್ಣಗೊಂಡ ನಂತರ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

- **ಬೃಹತ್ ನೀರುಗಾಲುವೆ ವಿಭಾಗ**

1. ವಾರ್ಡ್ ವ್ಯಾಪ್ತಿಯ ಶಾಂತಿ ನಗರ ಮತ್ತು ಓಂ ಶಕ್ತಿ ಬಡಾವಣೆಯ ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳೆತ್ತಲು ಕ್ರಮ ವಹಿಸುವಂತೆ ಸದಸ್ಯರಾದ ಕೋದಂಡ ರಾಮರೆಡ್ಡಿ ರವರು ಸಭೆಯಲ್ಲಿ ತಿಳಿಸಿದ್ದರು. ಸಭೆಗೆ ಗೈರು ಹಾಜರಿದ್ದ ಸಹಾಯಕ ಅಭಿಯಂತರ ರವರಿಗೆ ದೂರವಾಣಿ ಮುಖಾಂತರ ದೂರನ್ನು ಪರಿಶೀಲಿಸಿ ಕ್ರಮ ವಹಿಸುವಂತೆ ಅಧ್ಯಕ್ಷರು/ನೋಡಲ್ ಅಧಿಕಾರಿ ರವರು ಸೂಚಿಸಿದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7. ಕಛೇರಿ ಪ್ರತಿ.

Scanned with